ಪ್ರತಿಯೊಂದು ಧರ್ಮ ಕೂಡ, ಉನ್ನತ ಮಟ್ಟದ ಉದಾತ್ತ ಚರಿತರಾದ ಸ್ತ್ರೀಪುರುಷರನ್ನು ಕೊಟ್ಟಿರುವುದು. ಇಷ್ಟೊಂದು ಸಾಕ್ಷ್ಯಾಧಾರಗಳು ಇರುವಾಗಲೂ ಯಾರಾದರೂ ತಮ್ಮ ಧರ್ಮ ಒಂದೇ ಬಾಳುವುದು, ಇತರ ಧರ್ಮಗಳೆಲ್ಲವೂ ನಾಶವಾಗುವವು ಎಂದು ತಿಳಿದುಕೊಂಡರೆ ಅವರ ಅಜ್ಞಾನ, ಮತಾಂಧತೆ, ಮತಿಹೀನತೆಗಳನ್ನು ಕಂಡು ನಾನು ತೀವ್ರವಾಗಿ ಮರುಗುತ್ತೇನೆ, ಕನಿಕರಪಡುತ್ತೇನೆ. ಪ್ರತಿಯೊಂದು ಧರ್ಮದ ಧ್ವಜದ ಮೇಲೂ ವಿಭಿನ್ನ ಧರ್ಮಾನುಯಾಯಿಗಳು ಎಷ್ಟೇ ವಿರೋಧಿಸಿದರೂ 'ಹೋರಾಟವಲ್ಲ, ಸಹಾಯ', 'ನಾಶವಲ್ಲ, ಸ್ವೀಕಾರ', 'ವೈಮನಸ್ಯವಲ್ಲ, ಶಾಂತಿ ಮತ್ತು ಸಮನ್ವಯ' ಎಂಬುದನ್ನು ಬೇಗ ಬರೆಯಲಾಗುವುದು."

ವಿಜ್ಞಾನದ ಪರಮಾದ್ಭುತವಾದ ನೂತನ ಸಂಶೋಧನೆಗಳ ಬೆಳಕಿನಲ್ಲಿ ಇಡಿಯ ಜಗತ್ತೇ ಒಂದು ಎಂಬುದು ಸ್ಪಷ್ಟವಾಗಿರುವ ಸನ್ನಿವೇಶದಲ್ಲಿ ಜಗತ್ತಿನ ನಿಯಾಮಕನೂ ಒಬ್ಬನೇ. ಎಲ್ಲರೂ ದೇವರ ಮಕ್ಕಳೇ ಎಂಬ ಶ್ರೇಷ್ಠ ಸತ್ಯವನ್ನು ಎಲ್ಲ ಧಾರ್ಮಿಕ ಮುಖಂಡರೂ ಪ್ರಸಾರ ಮಾಡುವ ಕಾಲ ಸನ್ನಿಹಿತವಾಗಿದೆ.

❊ 'ಯಾರ ಮಹಿಮೆಯನ್ನು ಹಿಮವತ್ ಪರ್ವತಗಳೂ ಅಗಾಧ ಸಾಗರಗಳೂ ನದಿಗಳೂ ದಶದಿಕ್ಕುಗಳೂ ಸಾರುತ್ತವೆಯೋ ಆತನನ್ನು ನಮ್ಮ ಪರಿಶುದ್ಧ ನಿವೇದನೆಗಳಿಂದ ಪೂಜಿಸೋಣ.' *(ಋಗ್ವೇದ ೧೦-೧೨೧-೩)*

❊ 'ಸಪ್ತ ಸಮುದ್ರಗಳೂ ಭೂಮಿಯೂ ಅಲ್ಲಿದ್ದುಕೊಂಡಿರುವ ಎಲ್ಲವೂ ಅವನನ್ನು ಹೊಗಳಿ ಹಾಡುತ್ತವೆ. ಅವನನ್ನು ಹಾಡಿ ಹೊಗಳದ ಯಾವ ವಸ್ತುವೂ ಇಲ್ಲ. ಆದರೆ ಅವು ಮಾಡುವ ಸ್ತುತಿಯನ್ನು ನೀವು ತಿಳಿದುಕೊಂಡಿಲ್ಲ.' *(ಅಲ್ ಕೊರಾನ್, ೧೭.೪೪)*

❊ 'ಭಗವಂತನು ಚೈತನ್ಯಮಯನು, ಅವನು ಎಲ್ಲ ವಸ್ತುಗಳಲ್ಲಿಯೂ ವ್ಯಕ್ತನಾಗಿದ್ದಾನೆ – ಜೀವಾತ್ಮನು ಶರೀರದಲ್ಲಿ ವ್ಯಕ್ತವಾಗುವಂತೆ.' *(ಕ್ರೈಸ್ತರ ಪ್ರಸಿದ್ಧ ಪವಿತ್ರ ಗ್ರಂಥ, **ಫಿಲೋಕಾಲಿಯಾ** ಸಂ.೧.೩೩೭)*

❊ 'ಭಗವಂತನೇ ಸಮಸ್ತ ಜಗತ್ತಿನ ಉತ್ಪತ್ತಿಗೆ ಕಾರಣ. ಆತನಿಂದಲೇ ಜಗತ್ತು ನಡೆಯುತ್ತದೆ. *(ಭಗವದ್ಗೀತೆ-೧೦.೮)*

❊ 'ಕಣ್ಣು ತೆರೆದಿದ್ದರೂ ಸರ್ವಭೂತಗಳಲ್ಲಿಯೂ ಭಗವಂತನಿರುವುದನ್ನು ನೋಡಿದ್ದೇನೆ. ಮನುಷ್ಯರಲ್ಲಿ, ಪ್ರಾಣಿಗಳಲ್ಲಿ, ಗಿಡಮರಗಳಲ್ಲಿ, ಸೂರ್ಯಚಂದ್ರರಲ್ಲಿ, ನೆಲದಲ್ಲಿ, ಜಲದಲ್ಲಿ, ಸರ್ವಭೂತಗಳಲ್ಲಿಯೂ ಆತನೇ ಇದ್ದಾನೆ.' *–ಭಗವಾನ್ ಶ್ರೀರಾಮಕೃಷ್ಣ.*

ನಿಜವಾದ ಪ್ರೀತಿ ವ್ಯಕ್ತವಾಗುವ ಬಗೆ ಹೇಗೆ? ತ್ಯಾಗ ಸೇವೆಗಳ ಮೂಲಕ ಅಲ್ಲವೆ? ಪ್ರೀತಿಪಾತ್ರರ ಮೆಚ್ಚುಗೆಗಾಗಿ ಅವರ ಸಂತೋಷಕ್ಕಾಗಿ ಎಂಥ ತ್ಯಾಗಕ್ಕೂ ಸೇವೆಗೂ ನಾವು ಸಿದ್ಧರೆಂದಾದರೆ ನಮ್ಮಲ್ಲಿ ನಿಜವಾದ ಪ್ರೀತಿ ಉಕ್ಕುತ್ತಿದೆ ಎಂದಾಯಿತಲ್ಲವೆ? ಇಂದು ಧಾರ್ಮಿಕರೆನಿಸಿಕೊಂಡವರು ಎಲ್ಲರೆಡೆಗೂ ಆ ಪ್ರೀತಿಯನ್ನು ಹರಿಯಿಸಲು ಸಮರ್ಥರಾಗಿದ್ದಾರೆಯೇ?

ಪರಸ್ಪರ ದ್ವೇಷಿಸಲು ನಮ್ಮಲ್ಲಿ ಬೇಕಷ್ಟು ಧರ್ಮಗಳಿವೆ, ಆದರೆ ಪ್ರೀತಿಸಲು ಇಲ್ಲ.

'ಗಾಡ್', 'ಅಲ್ಲಾ', 'ಬ್ರಹ್ಮ' ಎಂಬೆಲ್ಲ ಹೆಸರುಗಳು ಬೇರೆ ಬೇರೆಯಾದರೂ ಸರ್ವಶಕ್ತನಾದ ಭಗವಂತನು ಒಬ್ಬನೇ. ಎಲ್ಲರೂ ಆತನ ಮಕ್ಕಳೇ. ಕೆಲವರು ಸ್ವಲ್ಪ ಮುಂದಿದ್ದಾರೆ. ಇನ್ನು ಕೆಲವರು ಸ್ವಲ್ಪ ಹಿಂದಿದ್ದಾರೆ. ನಾವೆಲ್ಲರೂ ಪ್ರೀತಿ ವಿಶ್ವಾಸದಿಂದ ಬದುಕಲು ಕಲಿಯಬೇಕೆಂಬುದೇ ಆತನ ಇಚ್ಛೆ. ಪ್ರೇಮಮಯನಾದ ಭಗವಂತನ ಪ್ರತಿನಿಧಿಗಳಾದ ಬೆಳಕು ಗಾಳಿಗಳು ಎಲ್ಲರ ಮನೆಯಂಗಳಕ್ಕೂ ಹರಡುತ್ತವೆ. ಎಲ್ಲೆಡೆಗೂ ಹಬ್ಬಿ ಎಲ್ಲರನ್ನೂ ತಬ್ಬಿ ಅವು ನಿಸ್ವಾರ್ಥಪ್ರೀತಿಯ ಪಾಠವನ್ನೇ ಬೋಧಿಸುತ್ತವೆ. ವಿವಿಧ ಆಕಾರಗಳಿಂದ ಗೋಚರಿಸಿದರೂ ಆತ ಒಬ್ಬನೇ. ಎಲ್ಲರೂ ಬೇರೆ ಬೇರೆ ಪಥಗಳಿಂದ ಅವನನ್ನು ಸಮೀಪಿಸುತ್ತಿದ್ದಾರೆ ಎಂಬ ಸತ್ಯ ಎಲ್ಲರಿಗೂ ಮನವರಿಕೆಯಾಗಬೇಕಾಗಿದೆ. ಅಸಂಖ್ಯ ದೇವದೇವಿಯರಾಗಿ ಕಂಡರೂ ಆತನೊಬ್ಬನೇ.

ಯಾವ ಮತ, ಪಂಥದವರೇ ಆಗಲಿ, ದೇವರಲ್ಲಿ ವಿಶ್ವಾಸವಿರುವವರೆಲ್ಲ ಶಾಂತಿ ಸೌಹಾರ್ದ ಸಮನ್ವಯ ಸದ್ಭಾವನೆಗಳು ಸರ್ವತ್ರ ವೃದ್ಧಿಯಾಗುವಂತೆ ಭಗವಂತನಲ್ಲಿ ಪ್ರಾರ್ಥಿಸಬೇಕು. ❁

**ಈಶ್ವರ ಅಲ್ಲಾ ತೇರೇ ನಾಮ್,**
**ಸಬಕೋ ಸನ್ಮತಿ ದೇ ಭಗವಾನ್.**

*(ಸಮಾಪ್ತಿ)*

## ನಾಮಜಪದ ಶಕ್ತಿ


ಪ್ರೀತಿಯಿಂದ ಮತ್ತೆ ಮತ್ತೆ ಹೆಸರು ಹೇಳುವುದೆ ಜಪ. ಹಾಗೆ ಮಾಡುತ್ತಾ ಹೋಗು. ಮಾಡುತ್ತಾ ಮಾಡುತ್ತಾ ಶಾಂತಿ ಆನಂದ ಅನುಭವಿಸುತ್ತೀಯೆ. ಜಪಕ್ಕೆ ಅಂಥಾ ವಿಶೇಷವಾದ ನಿಯಮ ಏನೂ ಇಲ್ಲ; ಸರ್ವಕಾಲಗಳಲ್ಲಿ, ಸರ್ವಸನ್ನಿವೇಶಗಳಲ್ಲಿ, ನಡೆಯುತ್ತಿರು, ಉಣ್ಣುತ್ತಿರು, ಮಲಗಿರು, ಎಚ್ಚೆತ್ತಿರು, ನಿದ್ರೆಯಲ್ಲಿ, ಸ್ವಪ್ನದಲ್ಲಿ, ಎಲ್ಲಿ ಅಂದರೆ ಅಲ್ಲಿ ಯಾವಾಗೆಂದರೆ ಆವಾಗ ಸರ್ವಾವಸ್ಥೆಗಳಲ್ಲಿಯೂ ಜಪಮಾಡಬಹುದು. ಅಸಲು ಮುಖ್ಯವಾಗಿ ಇರಬೇಕಾದ್ದೆಂದರೆ ಪ್ರೇಮ. ಎಷ್ಟು ಪ್ರೇಮಭರದಿಂದ ಆತನ ನಾಮಜಪ ಮಾಡುತ್ತೇಯೋ ಅಷ್ಟೂ ಹೆಚ್ಚಿನ ಆನಂದ ದೊರೆಯುತ್ತದೆ.

ಭಗವಂತನ ನಾಮಭಜನೆ ಮಾಡುತ್ತಾ ಸಂಯಮ ತನ್ನಷ್ಟಕ್ಕೆ ತಾನೆ ಉಂಟಾಗುತ್ತದೆ. ದೇವರ ಹೆಸರಿನಲ್ಲಿ ಎಂತಹ ಶಕ್ತಿ ಇದೆ ಎಂದರೆ ಅಂತರಿಂದ್ರಿಯ ಬಹಿರಿಂದ್ರಿಯ ಎಲ್ಲ ಸಂಯಮವಾಗಿ ಬಿಡುತ್ತದೆ.

–ಸ್ವಾಮಿ ಶಿವಾನಂದ

*('ಗುರುವಿನೊಡನೆ ದೇವರಡಿಗೆ' ಗ್ರಂಥದಿಂದ, ಭಾಗ ೨)*

# ಶ್ರೀಮದ್ಭಾಗವತ ಸಾರ



ಎ. ಮುರಳೀಧರ

### ಏಕಾದಶ ಸ್ಕಂಧ

## ಲೀಲಾ ಸಮಾಪ್ತಿ

**ನಾರದರಿಂದ ವಸುದೇವನಿಗೆ ಉಪದೇಶ:** ಶ್ರೀಕೃಷ್ಣನ ದರ್ಶನಕ್ಕೆ ನಾರದರು ಆಗಾಗ ದ್ವಾರಕೆಗೆ ಬರುತ್ತಲೇ ಇದ್ದರು. ಒಮ್ಮೆ ವಸುದೇವನ ಮನೆಗೂ ಬಂದರು. ವಸುದೇವನು ನಾರದರನ್ನು ಆದರಿಸಿ ಸತ್ಕರಿಸಿ, ಸಂಸಾರದಿಂದ ವಿಮೋಚನೆ ಪಡೆಯುವ ಬಗೆಯನ್ನು ತಿಳಿಸಲು ಅವರನ್ನು ವಿನಂತಿಸಿಕೊಂಡನು. ವಸುದೇವನು ಸ್ವತಃ ಭಗವಂತನನ್ನೇ ಮಗನಾಗಿ ಪಡೆದಿದ್ದರೂ, ಅವನ ಪ್ರಶ್ನೆಯು ನಾರದರಿಗೆ ಅಚ್ಚರಿ ತಂದಿತು. ಭರತನ ಒಂಬತ್ತು ಮಂದಿ ತಮ್ಮಂದಿರು ಭಾಗವತ ಮತ್ತು ಪರಮಾರ್ಥ ತತ್ತ್ವಗಳನ್ನು ಲೋಕಕಲ್ಯಾಣಾರ್ಥವಾಗಿ ಉಪದೇಶಿಸುವುದರಲ್ಲಿ ನಿರತರಾದರು. ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಆವಿಹೋತ, ದ್ರಮಿಳ, ಚಮಸ, ಕರಭಾಜನ ಎಂಬ ಆ ಒಂಬತ್ತು ಮುನಿಗಳು ಬೋಧಿಸಿದ ತತ್ತ್ವಗಳನ್ನು ಅವರು ಹೇಳಿದರು. ಭಾಗವತಧರ್ಮ, ಭಾಗವತರು, ಭಗವಂತನ ಮಹಿಮೆ, ಭಗವಂತನ ಮಾಯೆ ಮತ್ತು ಭಗವಂತನ ಸ್ವರೂಪ ಇವುಗಳ ತಿಳುವಳಿಕೆಯೇ ಭಾಗವತ ಧರ್ಮದ ಸೂಕ್ಷ್ಮಗಳಾಗಿವೆ ಎಂದು ನಾರದರು ಬೋಧಿಸಿದರು.

**ಶ್ರೀಕೃಷ್ಣಾವತಾರದ ಕೊನೆಯ ದಿನಗಳು:** ಹಿರಿಯ ಋಷಿಮುನಿಗಳು ಹತ್ತಿರದಲ್ಲಿದ್ದ ಪ್ರಭಾಸ ಎಂಬ ಪುಣ್ಯಕ್ಷೇತ್ರಕ್ಕೆ ಪ್ರವಾಸ ಬಂದರು. ಯಾದವರ ಹುಡುಗರು ಅಲ್ಲೇ ಆಟವಾಡುತ್ತಿದ್ದರು. ಅವರಿದ್ದಲ್ಲಿಗೆ ಬಂದ ಹುಡುಗರು ಆ ಋಷಿಗಳನ್ನು ಕೆಣಕಬೇಕೆಂದು ಯೋಚಿಸಿದರು. ಜಾಂಬವತಿಯ ಮಗನಾದ ಸಾಂಬನು ಸುಂದರನಾಗಿದ್ದರಿಂದ ಅವನಿಗೆ ಸ್ತ್ರೀ ವೇಷ ಹಾಕಿ, ಗರ್ಭಿಣಿಯಂತೆ ಅಲಂಕರಿಸಿದರು. ಅವನನ್ನು ಕರೆದುಕೊಂಡು ಬಂದು ಋಷಿಗಳ ಮುಂದೆ ನಿಲ್ಲಿಸಿದರು. ಅವರೆಲ್ಲರೂ ಋಷಿಗಳಿಗೆ ನಮಸ್ಕರಿಸಿ, 'ಈಕೆಗೆ ಹುಟ್ಟುವ ಮಗು ಗಂಡುಮಗುವೇ, ಅಥವಾ ಹೆಣ್ಣುಮಗುವೇ ತಿಳಿಸಿ' ಎಂದರು. ಋಷಿಗಳಿಗೆ ಇವರು ಕಪಟ ನಾಟಕವಾಡುತ್ತಿದ್ದರೆಂದು ತಿಳಿಯಿತು. ಅವರು ಸಿಟ್ಟಿಗೆದ್ದು, 'ಎಲೈ ಅವಿವೇಕಿಗಳೇ, ಇವಳಲ್ಲಿ ಗಂಡು ಹುಟ್ಟುವುದಿಲ್ಲ; ಹೆಣ್ಣೂ ಹುಟ್ಟುವುದಿಲ್ಲ. ಒನಕೆಯೊಂದು ಹುಟ್ಟುವುದು. ಆ ಒನಕೆಯಿಂದಲೇ ನಿಮ್ಮ ಕುಲದ ನಾಶವಾಗುತ್ತದೆ' ಎಂದರು. ಬಾಲಕರು ಗಾಬರಿಯಾಗಿ ಮನೆಗೆ ಹಿಂತಿರುಗಿದರು. ನಡೆದ ವಿಷಯವನ್ನು ತಿಳಿಸಿ, ಸಾಂಬನ ವೇಷ ಕಳಚಿದಾಗ ಆತನ ಹೊಟ್ಟೆಯಿಂದ ಉಕ್ಕಿನ ಒನಕೆಯೊಂದು ಹೊರಬಂದಿತ್ತು. ಹಿರಿಯರೆಲ್ಲ ಸಭೆ ಸೇರಿ, ಆ ಒನಕೆಯನ್ನು ಕುಟ್ಟಿ ಪುಡಿಮಾಡಿ ಸಮುದ್ರಕ್ಕೆ ಚೆಲ್ಲಿದರು. ಆ ಒನಕೆಯ ಚೂರೊಂದನ್ನು ಸಮುದ್ರದ ಒಂದು ಮೀನು ನುಂಗಿತು. ಅದೇ ಮೀನು ಮೀನುಗಾರನ ಬಲೆಗೆ ಸಿಲುಕಿತು. ಆ ಮೀನನ್ನು ಕೊಯ್ಯುವಾಗ ಅದರಲ್ಲಿದ್ದ ಒನಕೆಯ ಚೂರು ಮೀನುಗಾರನಿಗೆ ಸಿಕ್ಕಿತು. ಅವನು ಅದನ್ನು ತನ್ನ ಬಾಣಕ್ಕೆ ಚುಚ್ಚಿದನು. ಉಕ್ಕಿನ ಪುಡಿಯನ್ನು ಸಮುದ್ರವು ಹೊರಕ್ಕೆ ಹಾಕಿತು. ಆ ಪುಡಿಯೆಲ್ಲವೂ ತ್ರಿಶೂಲದಂತೆ ಚೂಪಾದ ಹುಲ್ಲುಗಾವಲಾಗಿ ಪರಿವರ್ತಿತವಾಯಿತು.

ಪ್ರಕೃತಿ ಮತ್ತು ಪರಿಸರವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಶ್ರೀಕೃಷ್ಣನು ಮುಂದಾಗಬಹುದಾದ ಅನಾಹುತವನ್ನು ಗ್ರಹಿಸಿದನು. ಅದಕ್ಕೆ ತಕ್ಕಂತೆ ಯಾದವರ ನಡವಳಿಕೆ, ಜೀವನದ ರೀತಿನೀತಿಗಳಲ್ಲಿನ ವ್ಯತ್ಯಾಸವನ್ನೂ ಅವನು ಗಮನಿಸಿದನು. ಯಾದವರು ಶ್ರೀಕೃಷ್ಣನ ಬೆಂಬಲ ಇದೆಯೆಂದು ಕೊಬ್ಬಿನಿಂದ ಮೆರೆಯುತ್ತಿದ್ದರು. ದರ್ಪ ಮತ್ತು ದುರಹಂಕಾರಗಳೇ ಅವರಿಗೆ ಭೂಷಣವೆನಿಸಿತು. ದ್ವಾರಕೆಯಲ್ಲಿ ಅಪಶಕುನವಾಗತೊಡಗಿತು.